# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SECONDARY EDUCATION EXAMINATION BOARD

Malleshwaram, Bengaluru – 560003.

## 2020-21 ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ – 2

**ವಿಷಯ : ಸಮಾಜ ವಿಜ್ಞಾನ** | **ವಿಷಯ ಸಂಕೇತ : 85-K**

**ಅವಧಿ : 3 ಗಂಟೆ 15 ನಿಮಿಷ** | **ಗರಿಷ್ಠ ಅಂಕಗಳು : 80**

**ಕನ್ನಡ ಮಾಧ್ಯಮ**

**ಶಾಲಾ ಅಭ್ಯರ್ಥಿಗಳಿಗೆ**

---

### ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 8 x 1 = 8**

1. ರಾಮಕೃಷ್ಣ ಮಿಷನ್‌ನ ಸ್ಥಾಪಕರು :
   - A. ಸ್ವಾಮಿ ವಿವೇಕಾನಂದ
   - B. ಅನಿಬೆಸೆಂಟ್
   - C. ಜ್ಯೋತಿಭಾ ಫುಲೆ
   - D. ರಾಜಾ ರಾಮಮೋಹನ್ ರಾಯ್

2. ಭಾರತದ ಉಕ್ಕಿನ ಮನುಷ್ಯ :
   - A. ಜವಹರ್ ಲಾಲ್ ನೆಹರು
   - B. ಮಹಾತ್ಮ ಗಾಂಧೀಜಿ
   - C. ಸರದಾರ್ ವಲ್ಲಭಬಾಯ್ ಪಟೇಲ್
   - D. ಸುಭಾಷ್ ಚಂದ್ರ ಬೋಸ್

3. ಲೋಕಪಾಲ ಸಂಸ್ಥೆಯ ಸ್ಥಾಪನೆಯ ಮುಖ್ಯ ಉದ್ದೇಶ :
   - A. ಪ್ರಾದೇಶಿಕ ಅಸಮತೋಲನವನ್ನು ತೆಗೆದುಹಾಕುವುದು.
   - B. ಭ್ರಷ್ಟಾಚಾರದ ವಿರುದ್ಧ ಹೋರಾಡುವುದು.
   - C. ಕೋಮುವಾದವನ್ನು ನಿರ್ಮೂಲನೆ ಮಾಡುವುದು.
   - D. ಲಿಂಗ ಸಮಾನತೆಯನ್ನು ತರುವುದು.

4. ಕೈಗಾ ಅಣು ಸ್ಥಾವರ ವಿರೋಧಿ ಚಳವಳಿಯ ನೇತೃತ್ವ ವಹಿಸಿದ್ದವರು :
   - A. ಎಂ.ಡಿ. ನಂಜುಂಡಸ್ವಾಮಿ
   - B. ಮೇಧಾ ಪಾಟ್ಕರ್
   - C. ಸುಂದರಲಾಲ್ ಬಹುಗುಣ
   - D. ಶಿವರಾಮ ಕಾರಂತ

5. ಬಾಲ ಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಜಾರಿಗೆ ಬಂದ ವರ್ಷ :
   - A. 1966
   - B. 1976
   - C. 1986
   - D. 1996

6. ಭಾರತದಲ್ಲಿ ಅತಿ ಹೆಚ್ಚು ಮಳೆ ಪಡೆಯುವ ಸ್ಥಳ

A. ಚಿರಾಪುಂಜಿ

B. ಅಗುಂಬೆ

C. ಗಂಗಾನಗರ

D. ಮಾಸಿನ್ ರಾಮ್

7. 1993ರ ಸಂವಿಧಾನದ 73ನೇ ತಿದ್ದುಪಡಿ ಕಾಯ್ದೆಯ ಮುಖ್ಯ ಉದ್ದೇಶ :

A. ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಜಾರಿಗೊಳಿಸುವುದು.

B. ಜ್ಯಾತ್ಯಾತೀತತೆ ಪದವನ್ನು ಸೇರಿಸುವುದು.

C. ಮತದಾರರ ವಯಸ್ಸನ್ನು 21 ರಿಂದ 18ಕ್ಕೆ ಇಳಿಸುವುದು.

D. ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡುವುದು.

8. ಪ್ರತಿ ವರ್ಷವು ವಿಶ್ವ ಗ್ರಾಹಕರ ದಿನವನ್ನು ಆಚರಿಸುವುದು :

A. ಆಗಸ್ಟ್ 10

B. ಮಾರ್ಚ್ 15

C. ನವೆಂಬರ್ 01

D. ಜನವರಿ 26

## II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8 x 1 = 8

9. ಜುನಾಘಡದ ಪ್ರಜೆಗಳು ತಮ್ಮ ನವಾಬನ ವಿರುದ್ಧ ದಂಗೆ ಎದ್ದರು. ಏಕೆ?

10. 'ವೇದಗಳಿಗೆ ಮರಳಿ' ಎಂಬುದಾಗಿ ಕರೆ ಕೊಟ್ಟವರು ಯಾರು?

11. ವಿಶ್ವ ಸಂಸ್ಥೆಯು ಮಾನವ ಹಕ್ಕುಗಳನ್ನು ಯಾವಾಗ ಅಳವಡಿಸಿಕೊಂಡಿತು?

12. ಹೆಣ್ಣು ಭ್ರೂಣ ಹತ್ಯೆ ಎಂದರೇನು?

13. ಕಾಫಿಯ ಹೂಮಳೆ ಎಂದರೇನು?

14. ಇಂದು ಒಳ ನಾಡಿನ ಜಲಸಾರಿಗೆಯ ಪಾತ್ರ ಕಡಿಮೆಯಾಗುತ್ತಿದೆ. ಏಕೆ?

15. ವಸತಿ ಹೀನರಿಗೆ ವಸತಿಯನ್ನು ಒದಗಿಸಲು ಜಾರಿಗೊಳಿಸಿರುವ ಯಾವುದಾದರೂ ಎರಡು ವಸತಿ ಯೋಜನೆಗಳನ್ನು ಹೆಸರಿಸಿ.

16. 1986ರ ಗ್ರಾಹಕ ಸಂರಕ್ಷಣಾ ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಗಿದೆ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8 x 2 = 16**

17. ಬಕ್ಸಾರ್ ಕದನದ ಪರಿಣಾಮಗಳನ್ನು ವಿವರಿಸಿ.

18. ಮೂರನೇ ಆಂಗ್ಲೋ–ಮರಾಠ ಯುದ್ಧದ ಫಲಿತಾಂಶಗಳಾವುವು?

19. ಕೋಮುವಾದ ದೇಶದ ಐಕ್ಯತೆಗೆ ಮಾರಕ ಹೇಗೆ?

ಅಥವಾ

ಪಂಚಶೀಲ ತತ್ವಗಳು ಭಾರತ ಮತ್ತು ಚೀನಾಗಳ ನಡುವಿನ ಸಂಬಂಧ ವೃದ್ಧಿಗೆ ಹೇಗೆ ಸಹಾಯಕವಾಗಿವೆ?

20. ಶ್ರಮ ವಿಭಜನೆಯಿಂದಾಗುವ ಅನುಕೂಲಗಳೇನು?

ಅಥವಾ

ದೊಂಬಿ/ಗಲಭೆಯಿಂದಾಗುವ ದುಷ್ಪರಿಣಾಮಗಳೇನು?

21. ಮಣ್ಣನ್ನು ಹೇಗೆ ಸಂರಕ್ಷಿಸಬಹುದು?

22. ಪರ್ವತ ಕಾಡುಗಳು ಮತ್ತು ಮ್ಯಾಂಗ್ರೊವ್ ಕಾಡುಗಳನ್ನು ವ್ಯತಯಿಸಿ.

23. ಅಧಿಕಾರ ವಿಕೇಂದ್ರೀಕರಣವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತ್ಯಗತ್ಯವಾಗಿದೆ. ಏಕೆ?

24. ಭಾರತೀಯ ಅಂಚೆ ಕಛೇರಿಗಳು ಒದಗಿಸುವ ಸೇವೆಗಳಾವುವು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ. 9 x 3 = 27**

25. ಬ್ರಿಟಿಷರ ಶಿಕ್ಷಣದಿಂದ ಭಾರತದ ಮೇಲಾದ ಪರಿಣಾಮಗಳನ್ನು ವಿವರಿಸಿ.

26. ಮೂರನೇಯ ಆಂಗ್ಲೋ–ಮೈಸೂರು ಯುದ್ಧದ ಪರಿಣಾಮಗಳೇನು?

ಅಥವಾ

ಭಾರತಕ್ಕೆ ಅನಿಬೆಸೆಂಟರ ಕೊಡುಗೆಗಳೇನು?

27. 1857ರ ಕ್ರಾಂತಿಗೆ ಕಾರಣವಾದ ಆರ್ಥಿಕ ಅಂಶಗಳನ್ನು ಪಟ್ಟಿ ಮಾಡಿ.

28. ಭಾರತ ಮತ್ತು ರಷ್ಯಗಳ ನಡುವಿನ ಸಂಬಂಧವನ್ನು ವಿವರಿಸಿ.

29. ಅಸ್ಪೃಶ್ಯತೆ ನಿವಾರಣೆಗೆ ಕೈಗೊಂಡಿರುವ ಕಾನೂನು ಕ್ರಮಗಳನ್ನು ವಿವರಿಸಿ.

30. ದೇಶದ ಅಭಿವೃದ್ಧಿಯಲ್ಲಿ ಸಂಪರ್ಕದ ಪ್ರಾಮುಖ್ಯತೆಯನ್ನು ವಿವರಿಸಿ.

ಅಥವಾ

ಕೈಗಾರಿಕೆಗಳು ಕೆಲವೇ ಪ್ರದೇಶಗಳಲ್ಲಿ ಸ್ಥಾನೀಕರಣಗೊಂಡಿವೆ. ಏಕೆ?

31. ಭೂಕಂಪಗಳಿಂದಾಗುವ ಪರಿಣಾಮಗಳನ್ನು ಹೇಗೆ ಮಿತಗೊಳಿಸಬಹುದು?

32. ಸ್ವಸಹಾಯ ಸಂಘಗಳ ಕಾರ್ಯಗಳನ್ನು ತಿಳಿಸಿ.

ಅಥವಾ

ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳನ್ನು ತಿಳಿಸಿ.

33. ಬ್ಯಾಂಕ್ ಖಾತೆ ತೆರೆಯುವುದರಿಂದಾಗುವ ಅನುಕೂಲಗಳಾವುವು?

ಅಥವಾ

ಬಳಕೆದಾರರ ಶೋಷಣೆಗೆ ಕಾರಣಗಳಾವುವು?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4 x 4 = 16**

34. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರಬೋಸರ ಸಾಧನೆಗಳನ್ನು ವಿವರಿಸಿ.

35. ತೀವ್ರವಾದಿಗಳು ಬ್ರಿಟಿಷರ ವಿರುದ್ಧ ಹೇಗೆ ಹೋರಾಟ ನಡೆಸಿದರು?

ಅಥವಾ

ಅಸಹಕಾರ ಚಳುವಳಿಯನ್ನು ಹೇಗೆ ಸಂಘಟಿಸಲಾಗಿತ್ತು?

36. ವಿಶ್ವ ಸಂಸ್ಥೆಯ ಸಾಧನೆಗಳನ್ನು ವಿವರಿಸಿ.

37. ಭಾರತದಲ್ಲಿ ಅನುಸರಿಸುತ್ತಿರುವ ವಿವಿಧ ಕೃಷಿ ವಿಧಾನಗಳನ್ನು ಹೆಸರಿಸಿ.

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ. 1 + 4 = 5**

A. ಮಲಬಾರ್ ತೀರ

B. ನರ್ಮದಾ ನದಿ

C. ತುಂಗಭದ್ರ ಯೋಜನೆ

D. ದೆಹಲಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38ರ ಬದಲಾಗಿ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳನ್ನು ಪಟ್ಟಿ ಮಾಡಿ. 5